## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ

**ಸಿ.ಸಿ ನಂ. 292/2019**

ಸಿ.ಡಬ್ಲ್ಯೂ -6
ಪಿ.ಡಬ್ಲ್ಯೂ -6

ಹೆಸರು : ಸವಿತಾ
ತಂದೆ:ಗಂಡ : ಸಿದ್ದರಾಮ
ವಯಸ್ಸು : 40 ವರ್ಷ
ಉದ್ಯೋಗ : ಮನೆಗೆಲಸ
ವಾಸಸ್ಥಳ : ಕೆರೂರ

ದಿನಾಂಕ:03.07.2024
ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ :**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1 ನನ್ನ ಮೈದುನ, ಚಾಸಾ-2, 3, 7 ರಿಂದ 10, 12, 13 ಪರಿಚಯ ಇರುತ್ತಾರೆ. ಚಾಸಾ-4 ನನ್ನ ಅತ್ತೆ, ಚಾಸಾ-5 ನೆಗೆಣ್ಣಿ, ಚಾಸಾ-11 ನನ್ನ ಗಂಡ ಇರುತ್ತಾರೆ. ನಾವು ಆವತ್ತು ನಮ್ಮ ಶೆಡ್ಡಿನಲ್ಲಿ ಕೆಲಸ ಮಾಡುತ್ತಿದ್ದೇವು. ಚಾಸಾ-1 ರವರು ಶೆಡ್ಡಿನ ಮೇಲೆ ಜಾಳಿಗೆ ಹಾಕಲು ಹೋದಾಗ ಕರೆಂಟ ತಂತಿ ನನ್ನ ಮೈದುನನ ಕುತ್ತಿಗೆ ಮೇಲೆ ಬಿದ್ದು ವಿದ್ಯುತ್ ಸಂಚಾರವಾಗಿ ಕೆಳಗೆ ಬಿದ್ದಿರುತ್ತಾರೆ. ಅವರನ್ನು ಹೋಗಿ ನೋಡಿದಾಗ ಅವರ ಬಾಯಿಯಲ್ಲಿ ಬುರುಗು ಬಂದಿತ್ತು ಮತ್ತು ಅವರ ಬೆನ್ನಿನ ಮೇಲೆ ತಂತಿ ಬಿದ್ದ ಕಾರಣ ವಿದ್ಯುತ ಸಂಚಾರ ಆಗಿ ಗಾಯ ಅಗಿತ್ತು. ನಂತರ ಚಾಸಾ-10, 12 ರವರು ಸೇರಿ ವಾಹನದಲ್ಲಿ ಚಾಸಾ-1 ರವರನ್ನು ಸೋಲಾಪೂರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ನಾವು 4-5 ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ನನ್ನ ಮಾವನ ಹೆಸರಿನಲ್ಲಿ ಸರ್ವೆ ನಂ.3/1 ರಲ್ಲಿ 12 ಎಕರೆ ಜಮೀನು ಇರುತ್ತದೆ ಎಂದರೆ ಸರಿ. 3 ಎಕರೆ ಜಮೀನಿನಲ್ಲಿ ಚಾಸಾ-1 ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ದ್ರಾಕ್ಷಿ ಬೆಳೆ ಇರುತ್ತದೆ ಎಂದರೆ ಸರಿ. ದ್ರಾಕ್ಷಿ ಒಣಗಿಸಲು ತಾತ್ಕಾಲಿಕ ಶೆಡ್ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ಶೆಡ್ಡಿನ ಮೇಲೆ ವಿದ್ಯುತ್ ತಂತಿ ಹಾದು ಹೋಗಿರುತ್ತದೆ ಎಂದರೆ ಸರಿ. ದಿ.07.03.2019 ರಂದು ಬೆಳಗ್ಗೆ 11.00 ಗಂಟೆಗೆ ನಾನು, ಚಾಸಾ-1, 4, 5 ಹೊಲಕ್ಕೆ ಹೋಗಿರುತ್ತೇವೆ ಎಂದರೆ ಸರಿ. ಚಾಸಾ-1 ರವರು ಶೆಡ್ಡಿನ ಮೇಲೆ ರೇಷ್ಮೆ ಜಾಳಿಗೆ ನೇಯುತ್ತ ಕುಳಿತಿದ್ದರು ಎಂದರೆ ಸರಿ. ವಿದ್ಯುತ ತಂತಿ ಎಂಗಲ್ ಅವರ ಹೆಗಲ ಮೇಲೆ ಕೆಳಗೆ ಬಿದ್ದಾಗ ಚಾಸಾ-1 ರವರು ನಾನು ಸತ್ತೆ ಎಂದು ಚೀರಿದರು ಎಂದರೆ ಸರಿ. ನಾವು ಅವರ ಬಳಿ ಹೋಗಿ ನೋಡಲಾಗಿ ಕರೆಂಟ್ ತಗುಲಿ ಎಡಕಿನ ಮೇಲೆ ಸುಟ್ಟ ಗಾಯ, ಬಲಕಿವಿಗೆ, ಮೂಗಿನ ಬಲಭಾಗಕ್ಕೆ ಸುಟ್ಟ ಗಾಯ ಆಗಿ ಎರಡು ಪಾದಗಳಿಂದ ವಿದ್ಯುತ ಸಂಚಾರ ಆಗಿರುತ್ತದೆ ಎಂದರೆ ಸರಿ. ಚಾಸಾ-10 ರವರು ಚಾಸಾ-11 ರವರಿಗೆ ಕರೆ ಮಾಡಿ ವಿಷಯ ತಿಳಿಸಿರುತ್ತಾರೆ ಎಂದರೆ ಸರಿ. ಚಾಸಾ-1 ರವರು

ಹಲವಾರು ಬಾರಿ ಮಾದನ ಹಿಪ್ಪರಗಾ ಕೆಇಬಿ ಕಚೇರಿಗೆ ಹೋಗಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಇರುವುದರಿಂದ ಚಾಸಾ-1 ರವರಿಗೆ ಗಾಯ ಆಗಿರುತ್ತದೆ ಎಂದರೆ ಸರಿ. ನಾನು ಈ ರೀತಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>**

ನನಗೆ ಹೊಲದ ಸರ್ವೆ ನಂಬರ ಗೊತ್ತಿಲ್ಲ. ಸದರಿ ಹೊಲ ಒಟ್ಟು 12-13 ಎಕರೆ ಇರುತ್ತದೆ. ಸದರಿ ಹೊಲ ನನ್ನ ಮಾವನ ಹೆಸರಿನಲ್ಲಿ ಇರುತ್ತದೆ. ಸದರಿ ಹೊಲದಲ್ಲಿ ಪಾಲು ಆಗಿಲ್ಲ. 3 ಎಕರೆ ಹೊಲ ನನ್ನ ಮಾವನ ಹೆಸರಿನಲ್ಲಿದೆ. ಸದರಿ ಹೊಲದ ಚಕುಬಂದಿ ಎಂದರೆ ಪೂರ್ವಕ್ಕೆ ಶ್ರೀಧರ ರವರ ಹೊಲ, ಪಶ್ಚಿಮಕ್ಕೆ ಮಲ್ಲಿನಾಥರವರ ಹೊಲ, ಉತ್ತರಕ್ಕೆ ಗೊತ್ತಿಲ್ಲ, ದಕ್ಷಿಣಕ್ಕೆ ಗೊತ್ತಿಲ್ಲ. ಹೊಲದ ಪಶ್ಚಿಮ ಮತ್ತು ಉತ್ತರಕ್ಕೆ 2 ಬಾವಿಗಳು ಇರುತ್ತವೆ. ಸದರಿ ಬಾವಿಗಳ ನೀರನ್ನು ವಿದ್ಯುತ ಮೋಟರದಿಂದ ಉಪಯೋಗಿಸುತ್ತೇವೆ. ಸದರಿ ಹೊಲದಲ್ಲಿ 2014 ರಲ್ಲಿ ದ್ರಾಕ್ಷಿ ಬೆಳೆ ಹಾಕಿರುತ್ತಾರೆ. ಆ ಸಮಯದಲ್ಲಿ ದ್ರಾಕ್ಷಿ ಬೆಳೆದಿದ್ದವು. ನನಗೆ ಯಾವ ತಾರಿಖಿನಂದು ಹೊಲಕ್ಕೆ ಹೋಗಿದ್ದೇವು ನೆನಪಿಲ್ಲ ಸಾಕ್ಷಿ ಮುಂದುವರೆದು ನಾವು ದಿನವೂ ಹೊಲಕ್ಕೆ ಹೋಗುತ್ತೇವೆ ಎಂದು ನುಡಿಯುತ್ತಾರೆ. ವಿದ್ಯುತ ತಂತಿಯು ಪೂರ್ವದಿಂದ ಪಶ್ಚಿಮಕ್ಕೆ ಹೋಗಿರುತ್ತವೆ ಸಾಕ್ಷಿಯು ಮುಂದುವರೆದು ಪೂರ್ವ-ಪಶ್ಚಿಮಕ್ಕೆ ಶೆಡ ಇದ್ದು ಉತ್ತಈ-ದಕ್ಷಿಣಕ್ಕೆ ವಿದ್ಯುತ ತಂತಿ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಹೊಲದಲ್ಲಿ 2 ವಿದ್ಯುತ ಕಂಬಗಳು ಇರುತ್ತವೆ. ಸದರಿ ಕಂಬಗಳು ಒಂದು ಪೂರ್ವ ಮತು ಒಂದು ಪಶ್ಚಿಮಕ್ಕೆ ಇರುತ್ತವೆ. ಎರಡು ಕಂಬಗಳಿಗೆ ವಿದ್ಯುತ ತಂತಿ ಮತ್ತು ಎಂಗಲಗಳು ಇರುತ್ತವೆ ಎಂದರೆ ಸರಿಯಲ್ಲ. ಒಂದು ಕಂಬ ಮೇನ ಲೈನ ಇದ್ದು ಅದಕ್ಕೆ ಎಂಗಲ ಇರುತ್ತದೆ ಇಲ್ಲವೋ ನನಗೆ ಗೊತ್ತಾಗುವುದಿಲ್ಲ. ಮೇನ ಲೈನ ಕಂಬಗಳು ಎತ್ತರದಲ್ಲಿ ಇರುತ್ತವೆ ಎಂದರೆ ಸರಿ. ವಿದ್ಯುತ ತಂತಿಯನ್ನು ಕಂಬಕ್ಕೆ ಯಾವುದರಿಂದ ಜೋಡಿಸುತ್ತಾರೆ ಎಂದು ಗೊತ್ತಿಲ್ಲ. ಮೇನ ಲೈನ ನೆಲದಿಂದ ಎಷ್ಟು ಎತ್ತರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಮೇನಲೈನ ಶೆಡ ಕಟ್ಟಿಸುವುದಕ್ಕಿಂತ ಮುಂಚೆಯಿಂದ ಇದ್ದು ಸುಮಾರು 10-15 ವರ್ಷ ಆಗಿರಬಹುದು. ಶೆಡನ್ನು 10 ವರ್ಷಗಳ ಹಿಂದೆ ಕಟ್ಟಿರಬಹುದು. ಸದರಿ ಹೊಲದಲ್ಲಿ ಪ್ರತಿವರ್ಷ ದ್ರಾಕ್ಷಿ ಬೆಳೆ ಬೆಳೆಯುತ್ತಾರೆ. ಸದರಿ ದ್ರಾಕ್ಷಿ ಬೆಳೆ ಮಾರ್ಚ ಎಪ್ರಿಲನಲ್ಲಿ ಬೆಳೆಯುತ್ತವೆ. ದ್ರಾಕ್ಷಿ ಬೆಳೆ ಯಾವ ರೀತಿ ಮಾರಾಟ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ದ್ರಾಕ್ಷಿ ಬೆಳೆದ ಮೇಲೆ ಅದನ್ನು ಕತ್ತರಿಸಿ ನೇರವಾಗಿ ಮಾರಾಟಕ್ಕೆ ಕಳುಹಿಸುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿಯು ಶೆಡ್ಡಿನಲ್ಲಿ ಹಾಕುತ್ತಾರೆ ಎಂದು ಹೇಳುತ್ತಾರೆ. ಸಂಪೂರ್ಣವಾಗಿ 3 ಎಕರೆ ದ್ರಾಕ್ಷಿ ಬೆಳೆಯುತ್ತೇವೆ. ಶೆಡ್ಡಿನ ಅಳತೆ ನನಗೆ ಗೊತ್ತಿಲ್ಲ. ಸದರಿ ಶೆಡಿನ ಮೇಲೆ ಹೋಗಲು ಮೆಟ್ಟಿಲುಗಳು ಇರುವುದಿಲ್ಲ, ಶೆಡು ಎಷ್ಟು ಎತ್ತರದಲ್ಲಿ ಇರುತ್ತದೆ ನನಗೆ ಗೊತ್ತಿಲ್ಲ. ವಿದ್ಯುತ ಎಂಗಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನ ನಾನು ವಿದ್ಯುತ ಕಂಬವನ್ನು ಮತ್ತು ಅದರಲ್ಲಿ ಇರುವ ಎಂಗಲನ್ನು ನೋಡಿಲ್ಲ ಎಂದರೆ ಸರಿಯಲ್ಲ ಸಾಕ್ಷಿಯು ಎಂಗಲ ಎಂದು ಯಾವುದಕ್ಕೆ ಅನ್ನುತ್ತಾರೆ ಎಂದು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ಯಾವತ್ತು ಪೋಲಿಸರಿಗೆ ಭೇಟಿ ಆಗಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ. ಚಾಸಾ-1 ರವರು ಘಟನೆ ನಡೆದ ಸಮಯದಲ್ಲಿ ಬನಿಯನ ಮತ್ತು ಪ್ಯಾಂಟ ಹಾಕಿದ್ದರು. ಚಾಸಾ-1 ರವರ ಜೊತೆ ಶೆಡಿನ ಮೇಲೆ ಯಾರು ಇರಲಿಲ್ಲ. ಶೆಡ್ಡು ವಿದ್ಯುತ ಲೈನ ಕೆಳಗೆ ಇರುತ್ತದೆ. ಚಾಸಾ-1 ರವರು ಶೆಡಿತ್ತಿನ ಮೇಲೆ ಕೆಲಸ ಮಾಡುವಾಗ ವಿದ್ಯುತ ಎಂಗಲ ಬಿದ್ದು ವಿದ್ಯುತ ತಗಲಿ ಗಾಯ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿದ್ಯುತ ತಂತಿ ತುಂಡು ಆಗಿ ಕೆಳಗೆ ಬಿಳಲಿಲ್ಲ ಅದರೆ ಅದು ಕೆಳಗೆ ಬಂದಿತ್ತು. ಒಟ್ಟು ಮೂರು ವಿದ್ಯುತ ತಂತಿಗಳು ಇರುತ್ತವೆ. ಅದರಲ್ಲಿ ಒಂದು ಅಥವಾ ಎರಡು ಕೆಳಗೆ ಬಂದಿತ್ತು. ಕಂಬದಿಂದ ವಿದ್ಯುತ ತಂತಿಯು ಎಷ್ಟು ಕೆಳಗೆ ಬಂದಿತ್ತು ಎಂದು ಹೇಳಲು ಬರುವುದಿಲ್ಲ. ಮೊದಲಿನಿಂದಲೂ ಸದರಿ ವಿದ್ಯುತ ತಂತಿಗಳನ್ನು ಕಂಬಕ್ಕೆ ಜೊಡಿಸಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ವಿದ್ಯುತತಂತಿಗಳನ್ನು ಯಾರಾದರೂ ಹೋಗಿ ತೆಗೆದಾಗ ಮಾತ್ರ ಅದು ಕಳಗೆ ಬರುತ್ತದೆ ಎಂದರೆ ಸರಿಯಲ್ಲ. ಸದರಿ ವಿದ್ಯುತ ಕಂಬದ ಬಳಿ ಆ ದಿನ ಹೊಲದಲ್ಲಿ ಕೆಲಸ ಮಾಡುವ ಕೆಲಸಗಾರರು

ಇದ್ದರು. ಅವರಿಗ ಯಾವುದೇ ಗಾಯ ಆಗಿರಲಿಲ್ಲ ಎಂದರೆ ಅವರು ಕೆಳಗೆ ಇದ್ದರು ಎಂದು ಹೇಳುತ್ತಾರೆ. ಆರೋಪಿತರನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ನನಗೆ ಅವರ ಪರಿಚಯ ಇಲ್ಲ ಎಂದರೆ ಸರಿ. ಘಟನೆಯು ಯಾರ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿ. ಚಾಸಾ-1 ರವರಿಗೆ ಚಾಸಾ-10, 12 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅವರು ಯಾವ ಕಾರಿನಲ್ಲಿ ಕರೆದುಕೊಂಡು ಹೋಗಿರುತ್ತಾರೆ ಎಂದು ಗೊತ್ತಿಲ್ಲ. ನಾನು ಸೋಲಾಪೂರಕ್ಕೆ ಹೋಗಿರುವುದಿಲ್ಲ. ಚಾಸಾ-1 ರವರು ಯಶೋಧಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಸದರಿ ವಿಷಯ ನಮ್ಮ ಮನೆಯವರು ನಮಗೆ ಹೇಳಿದ್ದಾರೆ. ಚಾಸಾ-1 ರವರಿಗೆ ವಿದ್ಯುತ ತಂತಿ ತಗಲಿ ಗಾಯ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1, 4, 5 ರವರು ಸೇರಿಕೊಂಡು ಪರಿಹಾರಕ್ಕಾಗಿ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ಯಾರು ಯಾರು ಕೆಲಸಕ್ಕೆ ಬಂದಿರುತ್ತಾರೆ ಎಂದು ಚಾಸಾ-1 ರವರು ಹಾಜರಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಿನದಂದು ಕೆಲಸಗಾರರ ಹಾಜರಿಯನ್ನು ಯಾರು ತೆಗೆದುಕೊಂಡಿರಲಿಲ್ಲ, ಆ ದಿನ ಅವರಿಗೆ ದಿನಗೂಲಿ ನೀಡಲಿಲ್ಲ ಎಂದರೆ ಸಾಕ್ಷಿಯು ವಾರಕ್ಕೊಮ್ಮೆ ಎಲ್ಲವನ್ನು ನಮೂದು ಮಾಡಿ ಹಣ ನೀಡುತ್ತೆವೆ ಎಂದು ಹೇಳುತ್ತಾರೆ. ಆ ದಿನ ಕೆಲಸಗಾರೊಂದಿಗೆ ಹೊಲಕ್ಕೆ ಹೋಗಿದ್ದೇವು ಮತ್ತು ವಿದ್ಯುತ ತಂತಿ ತಗುಲಿ ಚಾಸಾ-1 ರವರಿಗೆ ಗಾಯ ಆಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.